ಕರ್ನಾಟಕ ಸರ್ಕಾರ

# ಉಪ ತಹಶೀಲ್ದಾರರು, ಕರೂರು ಇವರ ನ್ಯಾಯಾಲಯ, ಕರೂರು.

ಸಂ/ಕಂ/ಹ.ಬ./62/2015-16 ದಿನಾಂಕ:22/07/2016

ಉಪಸ್ಥಿತರು: ಜಿ.ಬೈರಣ್ಣ
ಉಪ ತಹಶೀಲ್ದಾರರು, ಕರೂರು.

| ವಾದಿಗಳು | ಪ್ರತಿವಾದಿಗಳು |
|---|---|
| 1) ರಾಮಲಿಂಗಮ್ಮ ಅಲಿಯಾಸ್ ಪಾರ್ವತಮ್ಮ ತಂದೆ ದೊಡ್ಡರಂಗಪ್ಪ, ಗಂಡ ಶಿವಶಂಕರಪ್ಪ ಬಲಕುಂದಿ ಗ್ರಾಮ, ಸಿರುಗುಪ್ಪ ತಾಲೂಕು<br>2) ಮುದೇನೂರಪ್ಪ ತಂದೆ ಮೂಕಪ್ಪ ಬಲಕುಂದಿ ಗ್ರಾಮ, ಸಿರುಗುಪ್ಪ ತಾಲೂಕು | 1) ರುದ್ರಮ್ಮ ಗಂಡ ದಿವಂಗತ ಸಿದ್ದಪ್ಪ ಹಾಗಲೂರು ಗ್ರಾಮ, ಸಿರುಗುಪ್ಪ ತಾಲೂಕು |

ದಾವಾ ಜಮೀನಿನ ವಿವರ:

| ಗ್ರಾಮದ ಹೆಸರು | ಸರ್ವೆ ನಂ | ವಿಸ್ತೀರ್ಣ (ಎಕರೆ) | ಹ.ಬ ಸಂಖ್ಯೆ; | ವಹಿವಾಟು ಸಂಖ್ಯೆ |
|---|---|---|---|---|
| ಮೈಲಾಪುರ ಗ್ರಾಮ | 65/1 | 3.00 | ಹೆಚ್19/2015-16 | 86/2015-16 |

ಪೀಠಿಕೆ:

ಸಿರುಗುಪ್ಪ ತಾಲೂಕಿನ ಮೈಲಾಪುರ ಗ್ರಾಮದ ಸರ್ವೆ ನಂ: 65/1 ವಿಸ್ತೀರ್ಣ: 3.00 ಜಮೀನುಗೆ ಸಂಬಂಧಿಸಿದಂತೆ ಸಿರುಗುಪ್ಪ ಉಪ ನೊಂದಣಿ ಕಛೇರಿ ಕ್ರಯ ಪತ್ರ ನಂ: 05279/15-16 ದಿನಾಂಕ 04-11-2015 ರಾಮಲಿಂಗಮ್ಮ ಅಲಿಯಾಸ್ ಪಾರ್ವತಮ್ಮ ತಂದೆ ದೊಡ್ಡರಂಗಪ್ಪ, ಗಂಡ ಶಿವಶಂಕರಪ್ಪ ಇವರ ಹೆಸರಿನಲ್ಲಿ ಕ್ರಯ ಪತ್ರ ಪ್ರಕಾರ ಖಾತೆ ಬದಲಾವಣೆ ಮಾಡಲು ನಮೂನೆ-21 ನ್ನು ಪ್ರಚುರ ಪಡಿಸಲಾಗಿ ನಿಗದಿತ ಅವಧಿಯೊಳಗೆ ರುದ್ರಮ್ಮ ಗಂಡ ದಿವಂಗತ ಸಿದ್ದಪ್ಪ ಹಾಗಲೂರು ಗ್ರಾಮ ಇವರು ದಿನಾಂಕ 03-12-2015 ರಂದು ತಕರಾರು ಅರ್ಜಿ ಸಲ್ಲಿಸಿರುತ್ತಾರೆ ಸದ್ರಿ ಕಡತವನ್ನು ಮುಂದಿನ ಸೂಕ್ತ ಕ್ರಮಕ್ಕಾಗಿ ಕಂದಾಯ ಪರಿವೀಕ್ಷಕರು ಕರೂರು ಇವರು ಈ ಕಛೇರಿಗೆ ಸಲ್ಲಿಸಿರುತ್ತಾರೆ.

ಕರ್ನಾಟಕ ಭೂಕಂದಾಯ ಕಾಯ್ದೆ 1964 ಕಲಂ 129ರ ಅಡಿಯಲ್ಲಿ ವಿಚಾರಣೆಯನ್ನು ಕೈಗೊಳ್ಳಲು ತಿರ್ಮಾನಿಸುತ್ತಾ ಪ್ರಕರಣದಲ್ಲಿ ವಾದಿ, ಪ್ರತಿವಾದಿಗಳಿಗೆ ವಿಚಾರಣೆಗೆ ಹಾಜರಾಗಲು ಲಿಖಿತ ತಿಳುವಳಿಕೆ ನೋಟೀಸು ನೀಡುತ್ತಾ ವಿಚಾರಣೆಯನ್ನು ದಿನಾಂಕ: 18-03-2016, 11-04-2016, 07-05-2016, 03-06-2016, 08-07-2016, ಮತ್ತು 15-07-2016, ರಂದು ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆಸಲಾಯಿತು ವಿಚಾರಣೆಯಲ್ಲಿ ವಾದಿ ಮತ್ತು ಪ್ರತಿವಾದಿಗಳಿಂದ ಮಂಡಿಸಿದ ವಾದವನ್ನು ಆಲಿಸುತ್ತಾ ವಿವಾದಕೆ ಸಂಬಂದಿಸಿದಂತೆ ಕಾರಣಗಳು ಈ ರೀತಿ ಇರುವುದಾಗಿ ವ್ಯಕವಾಗಿದೆ.

ವಾದಿಗಳಾದ ರಾಮಲಿಂಗಮ್ಮ ಅಲಿಯಾಸ್ ಪಾರ್ವತಮ್ಮ ತಂದೆ ದೊಡ್ಡ ರಂಗಪ್ಪ ಗಂಡ ಶಿವಶಂಕರಪ್ಪ ಖುಂದಿ ಗ್ರಾಮ ಇವರು ಮೈಲಾಪುರ ಗ್ರಾಮದ ಸರ್ವೆ ನಂಬರ್ 65/1 ವಿಸ್ತೀರ್ಣ 3.00 ಜಮೀನು ಸಿರುಗುಪ್ಪ ಉಪ ನೊಂದಣಿ ಕಛೇರಿ ಕ್ರಯ ಪತ್ರ ನಂ: 05279/15-16 ದಿನಾಂಕ 04-11-2015 ರಂದು ಕ್ರಯ ನೊಂದಣಿ ಹೊಂದಿರುತ್ತೆನೆ ಪಟ್ಟ ವರ್ಗಾವಣೆ ಸಂಧರ್ಭದಲ್ಲಿ ರುದ್ರಮ್ಮ ಗಂಡ ದಿವಂಗತ ಸಿದ್ದಪ್ಪ ಹಾಗಲೂರು ಗ್ರಾಮ ಇವರು ನಿರಾಧಾರವಾಗಿ ವಿನಾಕಾರಣ ದುರುದ್ದೇಶ ಪೂರಿತವಾಗಿ ತಕರಾರು ಅರ್ಜಿಯನ್ನು ಸಲ್ಲಿಸಿರುತ್ತಾರೆ, ತಕರಾರು ಅರ್ಜಿ ತಳ್ಳಿ ಹಾಕಿ ಕ್ರಯ ನೊಂದಣಿ ಪತ್ರ ಪ್ರಕಾರ ನನ್ನ ಹೆಸರಿಗೆ ಪಟ್ಟ ವರ್ಗಾವಣೆ ಮಾಡಲು ಪ್ರಮಾಣ ಪತ್ರ ಸಲಿಸಿರುತ್ತಾರೆ.

<u>ಪ್ರತಿವಾದಿಗಳು</u>

ಪ್ರತಿವಾದಿಗಳಾದ ರುದ್ರಮ್ಮ ಗಂಡ ದಿವಂಗತ ಸಿದ್ದಪ್ಪ ಹಾಗಲೂರು ಗ್ರಾಮ ಸಿರುಗುಪ್ಪ ತಾಲೂಕು ಇವರು ಮೈಲಾಪುರ ಗ್ರಾಮ ಸರ್ವೆ ನಂಬರ್ 65/1 ವಿಸ್ತೀರ್ಣ 3.00 ಎಕರೆ ಜಮೀನು ಸಿರುಗುಪ್ಪ ಉಪ ನೊಂದಣಿ ಕಛೇರಿ ಪತ್ರ ಸಂಖ್ಯೆ ಎಸ್.ಎರ್.ಜಿ.-1-05279/15-16 ದಿನಾಂಕ 04-11-2015 ರಂದು ಕ್ರಯ ನೊಂದಣಿ ಪ್ರಕಾರ ಪಟ್ಟ ವರ್ಗಾವಣೆ ಸಂಧರ್ಭದಲ್ಲಿ ದಿನಾಂಕ 03-12-2015ರಂದು ತಕರಾರು ಅರ್ಜಿ ಸಲ್ಲಿಸಿದ್ದು ದಿನಾಂಕ 03-06-2016 ಮತ್ತು 08-07-2016 ರಂದು ಮಾತ್ರ ಹಾಜರು ಆಗಿರುತ್ತಾರೆ ಆದರೆ ಲಿಖಿತ ಹೇಳಿಕೆಯನ್ನಾಗಲಿ ಅಥವಾ ಸಂಬಂದ ಪಟ್ಟ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ.

ವಾದಿ ಮತ್ತು ಪ್ರತಿವಾದಿಗಳ ವಾದವನ್ನು ಆಲಿಸಿ ವಿಚಾರಣೆ ಮಾಡಲಾಗಿ ಸದರಿ ಜಮೀನು ಸಿರುಗುಪ್ಪ ಉಪ ನೊಂದಣಿ ಕಛೇರಿ ಪತ್ರ ಸಂಖ್ಯೆ ಎಸ್.ಎರ್.ಜಿ.-1-05279/15-16 ದಿನಾಂಕ 04-11-2015 ರಂದು ಕ್ರಯ ನೊಂದಣಿ ಪ್ರಕಾರ ಹಕ್ಕು ಬದಲಾವಣೆ ಮಂಜೂರು ಮಾಡಲು ಈಕೆಳಕಂಡಂತೆ.

-::ಆದೇಶ::-

ಪೀಠಿಕೆಯಲ್ಲಿ ವಿವರಿಸಿದಂತೆ ಸಿರುಗುಪ್ಪ ತಾಲೂಕಿನ ಮೈಲಾಪುರ ಗ್ರಾಮದ ಸರ್ವೇ ನಂಬರ್. 65/1 ವಿಸ್ತೀರ್ಣ 3.00 ಎಕರೆ ಜಮೀನು ಸಿರುಗುಪ್ಪ ಉಪ ನೊಂದಣಿ ಕಛೇರಿ ಪತ್ರ ಸಂಖ್ಯೆ ಎಸ್.ಎರ್.ಜಿ.-1-05279/15-16 ದಿನಾಂಕ 04-11-2015 ರಂದು ಕ್ರಯ ನೊಂದಣಿ ಪ್ರಕಾರ ರಾಮಲಿಂಗಮ್ಮ ಅಲಿಯಾಸ್ ಪಾರ್ವತಮ್ಮ ಗಂಡ ಶಿವಶಂಕರಪ್ಪ ಇವರ ಹೆಸರಿಗೆ ಹಕ್ಕು ಬದಲಾವಣೆ ಮಂಜೂರು ಮಾಡಲು ಆದೇಶಿಸಿದೆ

ಈ ಆದೇಶವನ್ನು ದಿನಾಂಕ:22-07-2016 ರಂದು ಹಕ್ಕು ಬದಲಾವಣೆ ಮಾಡಲು ತೆರೆದ ನ್ಯಾಯಾಲಯದಲ್ಲಿ ಘೋಷಣೆ ಮಾಡಲಾಗಿದೆ.

22/7/16

ಉಪ ತಹಶೀಲ್ದಾರರು,
ಕರೂರು
ತಾಲೂಕು ಸಿರುಗುಪ್ಪ,

ಇದರ ಪ್ರತಿಯನ್ನು:-

1.ವಾದಿ ಹಾಗೂ ಪ್ರತಿವಾದಿಗಳು.

2.ತಹಶೀಲ್ದಾರರ ಕಾರ್ಯಾಲಯ, ಸಿರುಗುಪ್ಪ ಗಣಕೀಕರಣ ಶಾಖೆಗೆ ಮುಂದಿನ ಕ್ರಮಕ್ಕಾಗಿ.

3.ಕಛೇರಿ ಕಡತಕ್ಕೆ.